ಮತ್ತು ಕ್ಯಾಲೆಂಡರ್ ಆಫ್ ಈವೆಂಟ್ಸ್ ಹಾಕಿರಲಿಲ್ಲವಾದ್ದರಿಂದ ಚುನಾವಣೆಯನ್ನು ಮುಂದಕ್ಕೆ ಹಾಕಲಾಯಿತು. ಇದರಲ್ಲಿ ಯಾವ ರಾಜಕೀಯ ಉದ್ದೇಶವೂ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಜೆ.ಡಿ ಸೋಮಪ್ಪ —ಮೂರು ಸಲ ತಾವು ಈ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೀರಿ, ಮೂರು ಸಾರಿಯೂ ಕೂಡ ಇದೇ ಕಾರಣಗಳೇ?

ಶ್ರೀ ಆರ್. ಎಲ್. ಜಾಲಪ್ಪ.— ಸ್ವಾಮಿ, ಎಲ್ಲಾ ಕಡೆಯೂ ಹಾಗಾಗಿದೆ. ತಮಗೆ ಹೇಳ ಬೇಕಾದರೆ ಇವತ್ತು ಬೀದರ್‌ನಲ್ಲೂ ಕೂಡ ಚುನಾವಣೆ ನಡೆದಿಲ್ಲ. ಅಲ್ಲಿ ಜಿಲ್ಲಾಧಿಕಾರಿಗಳೇ ಕಂಟಿನ್ಯೂ ಮಾಡುತ್ತಿದ್ದಾರೆ.

6. Statement by the Minister

(i) Reg : Settlement between Managemeut and Labour

Mr. Speaker.— Hon'ble Minister Sri Azeez Sait will make a a statement under Rule 334.

Sri Azeez Sait —Sir, regarding the matter raised by Sri M.M. Nanaiah and Sri G.K. Subbaiah under Rule 334, I have taken up a joint meeting and I have tried by best to bring a sort of settlement between the Management and the Labour Representative. The Management and the Labour Representative have agreed to enter in to an agreement and the agreement had to be taken place at Madikeri and at this stage, the Labour leader has gone back. I have referred the matter for adjudication. The latest information is that 80% of the workers have gone to the work and the matter has been referred to adjudication.

(ii) ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಭಡ್ತಿ ಕೊಡುವ ವಿಚಾರ

ಶ್ರೀ ಬಿ ರಾಚಯ್ಯ (ಶಿಕ್ಷಣ ಮಂತ್ರಿಗಳು) — ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಕೆ.ಎಸ್. ಕಾಳ ಮರಿ ಗೌಡರು ರೂಲ್ 334ರ ಕೆಳಗೆ ಪ್ರಸ್ತಾಪಿಸಿದ ವಿಷಯದಲ್ಲಿ ಈ ಕೆಳಕಂಡಂತೆ ಹೇಳಿಕೆಯನ್ನು ಕೊಡಲು ಇಷ್ಟಪಡುತ್ತೇನೆ.

ಸ್ವಾಮಿ, ಬೆಂಗಳೂರು ವಿಭಾಗದ ಜಂಟೀ ನಿರ್ದೇಶಕರು ದಿನಾಂಕ 1-10-1983ರಂದು ತಮ್ಮ ಕಛೇರಿ ಪತ್ರ ಸಂಖ್ಯೆ : ಎ 12 ಜೆಡಿಎನ್ 1/83-84ರ ಮೂಲಕ 248 ಜನ ತರಬೇತಿ ಪಡೆದ ಪದವೀಧರ ಪ್ರಾಥಮಿಕ ಶಾಲೆಯ ಉಪಾಧ್ಯಾಯರ ಹಂಗಾಮಿ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಇದರ ಬಗ್ಗೆ ತಕರಾರುಗಳನ್ನು ಕರೆದಿದ್ದರು. ಈ ತಕರಾರುಗಳನ್ನು ಪರಿಶೀಲಿಸಿದ ನಂತರ ಮುಂದಿನ 15 ದಿನಗಳೊಳಗಾಗಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ನಿರೀಕ್ಷೆಯಿದ್ದು, ಅನಂತರ ಪ್ರಾಥಮಿಕ ಶಾಲೆಯ ಉಪಾಧ್ಯಾಯರ ಹುದ್ದೆಯಿಂದ, ಪ್ರೌಢಶಾಲಾ ಶಿಕ್ಷಕರ ಹುದ್ದೆಗೆ ನಿಯಮದ ಪ್ರಕಾರ ಅರ್ಹರಿಗೆ ಭಡ್ತಿಯನ್ನು ಕೊಡಲಾಗುವುದು.

ಶ್ರೀ ಬಿ.ಎ. ಜೀವಿಜಯ (ಅರಣ್ಯ ಖಾತೆಯ ರಾಜ್ಯ ಮಂತ್ರಿಗಳು).— ಸ್ವಾಮಿ, ರೂಲು 334ರ ಕೆಳಗೆ ಶ್ರೀಮಾನ್ ಜೆ ಡಿ ಸೋಮಪ್ಪನವರು ಪ್ರಸ್ತಾಪಿಸಿದ ವಿಷಯದಲ್ಲಿ ಈ ಕೆಳಕಂಡಂತೆ ಹೇಳಿಕೆಯನ್ನು ಕೊಡಲು ಇಷ್ಟಪಡುತ್ತೇನೆ ವಿಷಯ ಈ ರೀತಿ ಇದೆ

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕು ಹೆಬ್ಬಸಾಲೆ ಗ್ರಾಮವಾಸಿ ಶ್ರೀ ಕೆ.ಜಿ. ಸುಬ್ರಮಣ್ಯ ಎಂಬುವರು 16-12-83ರಂದು ದೂರು ಅರ್ಜಿ ಕೊಟ್ಟು ಸಕಲೇಶಪುರ ಶಾಸಕರಾದ ಶ್ರೀ ಜೆ.ಡಿ. ಸೋಮಪ್ಪನವರು ಹೆಬ್ಬಸಾಲೆ ಗ್ರಾಮದ ಸರ್ವೆ ನಂ. 324 ಮತ್ತು 329ರ ಜಮೀನಿನಲ್ಲಿರುವ ಮರ ಗಳನ್ನು ಅಕ್ರಮವಾಗಿ ಕಡಿದಿದ್ದಾರೆಂದು ತಿಳಿಸಿದ್ದಾರೆ. ಈ ದೂರು ಅರ್ಜಿಯ ನಕಲುಗಳನ್ನು ಅರಣ್ಯ ಸಚಿವರಿಗೆ ಅರಣ್ಯವಲಯಾಧಿಕಾರಿಗಳಿಗೂ ಸಕಲೇಶಪುರದ ಉಪ ವಿಭಾಗಾಧಿಕಾರಿಗಳಿಗೂ ಕೊಟ್ಟಿರುತ್ತಾರೆ. ದೂರು ಅರ್ಜಿಯನ್ನು ಸಹಾಸನದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ರಿಜಿಸ್ಟರ್ಡ್ ಅಂಚೆ ಮೂಲಕ ಬಂದಿರುತ್ತೆ. ದೂರು ಅರ್ಜಿ ಆಧಾರದ ಮೇಲೆ ಸಕಲೇಶಪುರದ ಅರಣ್ಯ ವಲಯಾಧಿಕಾರಿ ಸ್ಥಳ ತನಿಖೆ ಮಾಡಿ ದಿನಾಂಕ 25-12-83ರಂದು ಜಮೀನಿನಲ್ಲಿ 127 ಮರಗಳನ್ನು ಕಡಿದು ಅದರಿಂದ ಬಂದ 175 ಘನ ಮೀಟರ್ ಅಂದರೆ ಸುಮಾರು 7 ಲಾರಿ ಲೋಡ್ ಸೌದೆಯನ್ನು ಸರ್ಕಾರಕ್ಕೆ ಅಮಾನತ್ತು ಮಾಡಿ ಪ್ರಕರಣವನ್ನು ಎಸ್.ಕೆ.ಪಿ.ಎಫ್.ಓ.ಸಿ. 367—83-84ರಂತೆ ದಾಖಲು ಮಾಡಿ ಕೊಂಡಿದ್ದಾರೆ. ಈ ಬಗ್ಗೆ ಅಪರಾಧದ ಮೊದಲ ವರದಿಯನ್ನು ಅರಣ್ಯವಲಯಾಧಿಕಾರಿಗಳು ಕಳುಹಿಸಿದ್ದಾರೆ. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ದೂರು ಅರ್ಜಿಯನ್ನು ಸಹಾಯಕ ಅರಣ್ಯ

ಸಂರಕ್ಷಣಾಧಿಕಾರಿಯವರಿಗೆ ಕಳುಹಿಸಿಕೊಟ್ಟು ತನಿಖೆ ಮಾಡಲು ಸೂಚಿಸಿರುತ್ತಾರೆ. ಇದರಂತೆ ಸಹಾಯಕ ಅರಣ್ಯ ಅಧಿಕಾರಿಗಳು 21-1-1984ರಂದು ಸ್ಥಳ ಪರಿಶೀಲನೆ ಮಾಡಿ 489-595 ಘನ ಮೀಟರ್‌ನಷ್ಟು ಸೌದೆಯನ್ನು ಸರ್ಕಾರಕ್ಕೆ ಅಮಾನತ್ತುಪಡಿಸಿರುತ್ತಾರೆ. ಈ ಸೌದೆಯು ಮರಗಸಿ ಮಾಡಿದ್ದರೆ ಮೂಲಕ ಬಂದಿರುತ್ತದೆ. ಆದ್ದರಿಂದ ಒಟ್ಟು ಸುಮಾರು 664 ಘನ ಮೀಟರ್‌ನಷ್ಟು ಅಂದರೆ 30 ಲಾರಿಯಷ್ಟು ಸೌದೆಯನ್ನು ಈ ಪ್ರಕರಣದಲ್ಲಿ ಸರ್ಕಾರಕ್ಕೆ ಅಮಾನತ್ತುಪಡಿಸಿಕೊಳ್ಳಲಾಗಿದೆ.

ಮೇಲೆ ಹೇಳಿದ ಹಾಗೆ 127 ಮರಗಳನ್ನು ಅಕ್ರಮವಾಗಿ ವ್ಯಕ್ತಾಧಿಕಾರಿಯ ಪೂರ್ವಾನುಮತಿ ಇಲ್ಲದೆ ಕಡಿದಿರುವುದು ಕರ್ನಾಟಕ ಮರಗಳ ಸಂರಕ್ಷಣ ಕಾಯಿದೆ ಸೆಕ್ಷನ್ 8ರ ಪ್ರಕಾರ ಅಪರಾಧವಾಗಿರುತ್ತದೆ.

ಈ ಮಧ್ಯೆ ಶಾಸಕರಾದ ಶ್ರೀ ಜೆ ಡಿ. ಸೋಮಪನವರು 22-12-83ರಲ್ಲಿ ಹಾಸನದ ವೃಕ್ಷ ಅಧಿಕಾರಿಗೆ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಸರ್ವೆ ನಂ. 324ರಲ್ಲಿ 108 ಮೆದು ಮತ್ತು ಕಾಡು ಮರಗಳನ್ನು ಕಡಿಯಲು (ಸುಮಾರು 2 ಲಾರಿ ಲೋಡ್) ಮತ್ತು ಸುಮಾರು 35 ಲಾರಿ ಲೋಡಿನಷ್ಟು ಸೌದೆಯನ್ನು ಈ ಪ್ರದೇಶದಿಂದ ತೆಗೆಯಲು ಅರ್ಜಿ ಸಲ್ಲಿಸಿರುತ್ತಾರೆ. ಈ ಅರ್ಜಿಯನ್ನು ಹಾಸನದ ವಿಶೇಷ ಜಿಲ್ಲಾಧಿಕಾರಿಯವರಿಗೆ ಕಂದಾಯ ಇಲಾಖೆಯ ಒಪ್ಪಿಗೆಗಾಗಿ 23-12-83 ರಲ್ಲಿ ಕಳುಹಿಸಿಕೊಡಲಾಗಿದೆ. ಕಂದಾಯ ಇಲಾಖೆಯ ಒಪ್ಪಿಗೆ ಬಂದ ಮೇಲೆ ಈ ಪ್ರಕರಣದಲ್ಲಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು. ಮಾನ್ಯ ವಿಧಾನಸಭಾ ಸದಸ್ಯರು ಸುಮಾರು ಜನವರಿ ಮಧ್ಯ ಭಾಗದಲ್ಲಿ ದೂರವಾಣಿ ಮೂಲಕ ಅರಣ್ಯ ಸಂರಕ್ಷಣಾಧಿಕಾರಿಗಳೊಡನೆ ಖುತನಾಡಿ ಅವರ ಜಮೀನಿನಲ್ಲಿ ಸೌದೆ ತೆಗೆಯುವುದರ ಬಗ್ಗೆ ಕೂಡಲೇ ರಹದಾರಿ ಕೊಡಬೇಕೆಂದು ಕೇಳಿಕೊಂಡಿರುತ್ತಾರೆ. ಆದ್ದರಿಂದ ದೂರು ಅರ್ಜಿ, ಅಪರಾಧ ಪ್ರಕರಣ ಮತ್ತು ರಹದಾರಿ ಅರ್ಜಿಗಳನ್ನು ಪರಿಶೀಲಿಸಲಾಯಿತು. ದೂರು ಅರ್ಜಿಯಲ್ಲಿ ಸರ್ವೆ ನಂ. 329ರಲ್ಲೂ ಮರ ಕಡಿದಿದ್ದಾರೆ ಎಂಬ ಉಲ್ಲೇಖವಿದ್ದುದರಿಂದ ಸದರಿ ಜಮೀನಿನ ಸ್ವಾಧೀನತೆ ಬಗ್ಗೆ ಸಕಲೇಶಪುರ ಉಪ ವಿಭಾಗ ಅಧಿಕಾರಿಗಳ ಮುಂದೆ ಕ್ರಿಮಿನಲ್ ಪ್ರೊಸೀಜರ್ ಕೋಡಿನ ಸೆಕ್ಷನ್ 145ರ ಮೊಕದ್ದಮೆಯು ಬಾಕಿ ಇರುವುದರಿಂದ ಮತ್ತು ಉಪ ವಿಭಾಗ ದಂಡಾಧಿಕಾರಿಗಳ ಎಮ್.ಎ.ಜೆ.ಸಿ.ಆರ್. 2-79-80ರ ದಿನಾಂಕ 26-10-83ರ ಆದೇಶದಲ್ಲಿ ಹೆಬ್ಬಸಾಲೆ ಗ್ರಾಮದ ಸರ್ವೆ ನಂ. 329ರಲ್ಲಿ ಸೌದೆ ಕಡಿಯಲು ಸದರಿ ನ್ಯಾಯಾಲಯ ಮುಂದಿನ ಆದೇಶವಾಗುವವರೆಗೂ ಕೊಡಕೂಡದೆಂಬ ನಿರ್ದೇಶನ ಇದ್ದುದರಿಂದ ಮತ್ತು ಶಾಸಕರ ಮನವಿಯನ್ನು ಕಾನೂನು ರೀತಿಯಿಂದ ಶೀಘ್ರ ಇತ್ಯರ್ಥಗೊಳಿಸುವ ದೃಷ್ಟಿಯಿಂದ ಉಪ ಅರಣ್ಯ ಸರಂಕ್ಷಣಾಧಿಕಾರಿಗಳು ಮತ್ತು ವಿಶೇಷ ಜಿಲ್ಲಾ ಅಧಿಕಾರಿಗಳು ಅವರು ಸಿಬ್ಬಂದಿಯವರೊಡನೆ ದಿನಾಂಕ 1-2-84ರಂದು ಸುಮಾರು ಬೆಳಿಗ್ಗೆ 9 ಗಂಟೆ ಸಮಯದಲ್ಲಿ ಶ್ರೀ ಜೆ ಡಿ. ಸೋಮಪ್ಪನವರ ಎಸ್ಟೇಟಿನಲ್ಲಿ ಮೇಲ್ವಿಚಾರಕರಾದ ಶ್ರೀ ಬಿ ಮಲ್ಲಿಕಾರ್ಜುನರವರ ಸಮಕ್ಷಮದಲ್ಲಿ ಸ್ಥಳ ತನಿಖೆ ಮಾಡಲಾಯಿತು.

ಸರ್ವೆ ನಂ. 324ರಲ್ಲಿ ಶ್ರೀ ಜೆ.ಡಿ. ಸೋಮಪ್ಪನವರಿಗೆ 10 ಎಕರೆ ಜಮೀನು ಮೈಸೂರು ವಿಭಾಗಾಧಿಕಾರಿಯವರ ಆದೇಶ ಸಂಖ್ಯೆ ಎಲ್.ಎನ್.ಡಿ 111 543 64-65 ದಿನಾಂಕ 26-10-65ರ ಪ್ರಕಾರ ಹಂಗಾಮಿ ಸಾಗುವಳಿಗೆ ಮಂಜೂರು ಮಾಡಿರುತ್ತಾರೆ ಮಂಜೂರುದಾರರು ಕಿಮ್ಮತ್ತು ಮತ್ತು ಮಾಲ್ಕಿ ಬೆಲೆಯನ್ನು ಪಾವತಿ ಮಾಡಿ ಜಮೀನನ್ನು ಕಾಫಿ ಬೆಳೆಗೆ ಒಳಪಡಿಸಿರುವುದರಿಂದ ಆದೇ ಜಮೀನನ್ನು ಮೈಸೂರು ವಿಭಾಗಾಧಿಕಾರಿಗಳು ಅವರ ಆದೇಶ ಸಂಖ್ಯೆ ಎಲ್.ಎನ್.ಡಿ.ಸಿ.ಆರ್. 99 82-83 ರೀತ್ಯಾ ಖಾಯಂಗೊಳಿಸಿರುತ್ತಾರೆ. ಈ ರೀತಿ ಮಂಜೂರಾದ ಜಮೀನಿನಲ್ಲಿ ಶ್ರೀ ಜೆ.ಡಿ. ಸೋಮಪ್ಪನವರು ಮರ ಕಡಿದು ಸೌದೆ ಮಾಡಿರುತ್ತಾರೆ.

ಸರ್ವೆ ನಂ. 324ರಲ್ಲಿ ಶ್ರೀ ಎ ಎಸ್. ವಿಶ್ವನಾಥ್‌ರವರಿಗೂ ಮೈಸೂರು ವಿಭಾಗಾಧಿಕಾರಿಗಳ ಆದೇಶ ಸಂಖ್ಯೆ ಎಲ್.ಎನ್.ಡಿ. 111 543-64-65 ದಿನಾಂಕ 26-10-65ರಲ್ಲಿ 10 ಎಕರೆ ಜಮೀನು ಮಂಜೂರು ಮಾಡಿದ್ದು ಅವರು ಕಿಮ್ಮತ್ತು ಮತ್ತು ಮಾಲ್ಕಿ ಬೆಲೆ ಕಟ್ಟಿ ಕಾಫಿ ಬೆಳೆ ಮಾಡಿದ್ದರಿಂದ ವಿಭಾಗಾಧಿಕಾರಿಗಳು 26-5-83ರಲ್ಲಿ ಖಾಯಂಗೊಳಿಸಿರುತ್ತಾರೆ. ಈ ಜಮೀನಿನಲ್ಲಿಯೂ ಮರ ಕಡಿದು ಸೌದೆ ಮಾಡಿರುತ್ತಾರೆ. ಶ್ರೀ ಎ.ಎಸ್. ವಿಶ್ವನಾಥ್‌ರವರು ಈ ಬಗ್ಗೆ ಯಾವುದೇ ಅರ್ಜಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಸಲ್ಲಿಸಿರುವುದಿಲ್ಲ. ಶ್ರೀ ಜೆ. ಡಿ. ಸೋಮಪ್ಪನವರೇ 22-12-1983ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಸಲ್ಲಿಸಿದ ಅರ್ಜಿಯಲ್ಲಿ ಎ.ಎಸ್. ವಿಶ್ವನಾಥ್‌ರವರಿಗೆ ಸೇರಿದ ಜಮೀನಿನಲ್ಲೂ ತಾನು ಮರಗಸಿ ಮಾಡಿರುತ್ತೇನೆಂದು ತಿಳಿಸಿ ಇಬ್ಬರಿಗೂ ಸೇರಿದ ಜಮೀನಿನಲ್ಲಿ ಮರ ಕಡಿದು ಮಾಡಿದ 35 ಲಾರಿ ಲೋಡು ಸೌದೆಗೆ ಮತ್ತು ಎಣಕೆ ಮಾಡಿರುವ 108 ಮೆದು ಮರಗಳನ್ನು ಕಡಿಯಲು ರಹದಾರಿಯನ್ನು ಕೇಳಿರುತ್ತಾರೆ.

ಶ್ರೀ ಜೆ ಡಿ ಸೋಮಪ್ಪನವರು 22-12-83ರಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಬರೆದು ಕೊಟ್ಟ ಅರ್ಜಿಯಲ್ಲಿ ಹಿಂದೆ ಇದೇ ರೀತಿಯ ಅಪರಾಧಕ್ಕೆ ಎಫ್.ಓ.ಸಿ. 112-77-78ರಂತೆ ಮೊಕದ್ದಮೆ

ದಾಖಲಾಗಿದ್ದನ್ನು ನಮೂದಿಸಿದ್ದಾರೆ. ಈ ಮೊಕದ್ದಮೆಯಲ್ಲಿ 250ರೂ. ದಂಡವನ್ನು ತೆಗೆದುಕೊಳ್ಳುವುದರ ಮೂಲಕ ಇಲಾಖಾವತಿಯಿಂದ ಪ್ರಕರಣವನ್ನು ರಾಜಿ ಮಾಡಿಕೊಳ್ಳಲಾಗಿದೆ.

ಮಾನ್ಯ ಶಾಸಕರಾದ ಶ್ರೀ ಜೆ.ಡಿ. ಸೋಮಪ್ಪನವರಿಗೆ ಕರ್ನಾಟಕ ಮರಗಳ ಸಂರಕ್ಷಣಾ ಕಾಯಿದೆಯನ್ವಯ ಪೂರ್ವಾನುಮತಿ ಇಲ್ಲದೆ ಮರಗಳನ್ನು ಕಡಿಯುವುದು ಅಪರಾಧವೆಂದು ಗೊತ್ತಿದ್ದರೂ ಎಫ್.ಓ.ಸಿ. 112-77-78ರಲ್ಲಿ ಅಪರಾಧವೆಸಗಿ ದಂಡತೆತ್ತು ರಾಜಿ ಮಾಡಿಸಿಕೊಂಡಿದ್ದರೂ ಕೂಡ ಅದೇ ಅಪರಾಧವನ್ನು ಪುನಃ ಎಸಗಿದ್ದಾರೆ. ಅರ್ಜಿ ಕೊಡುವ ಮೊದಲೇ 127 ಮರಗಳನ್ನು ಕಡಿದು ಅಪರಾಧವೆಸಗಿದ್ದರೂ, ಅರ್ಜಿಯಲ್ಲಿ ನಮೂದಿಸಿರುವುದಿಲ್ಲ. ಈ ನಮೂನೆ ಅಪರಾಧವನ್ನು ತನ್ನ ಜಮೀನಿನಲ್ಲಿ ಮಾಡಿರುವುದಲ್ಲದೆ ಎ.ಎಸ್. ವಿಶ್ವನಾಥ್‌ರವರ ಜಮೀನಿನಲ್ಲೂ ಎಸಗಿದ್ದಾರೆ.

ಇದೇ ರೀತಿ ಸರ್ವೆ ನಂ. 329ರಲ್ಲೂ ಅಕ್ರಮ ಮರ ಕಡಿಯುವ ಅಪರಾಧ ನಡೆದಿದ್ದು 5-7-80 ರಂದು ಪ್ರಕರಣವನ್ನು ದಾಖಲು ಮಾಡಲಾಯಿತು.

ಹೆಬ್ಬಸಾಲೆ ಗ್ರಾಮದಲ್ಲಿ ಅಕ್ರಮ ಮರ ಕಡಿಯುವ ಅಪರಾಧಗಳನ್ನು ಆಗಾಗ್ಗೆ ನಡೆಯುತ್ತಿರುವುದರಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕಾನೂನು ರೀತಿ ಜಾಗೃತರಾಗಿ ಕ್ರಮಕ್ಕೆಗೊಳ್ಳುವುದು ನ್ಯಾಯ ಸಮ್ಮತವಾಗಿದೆ. ಶಾಸಕರಾದ ಶ್ರೀ ಜೆ.ಡಿ. ಸೋಮಪ್ಪನವರ ರಹದಾರಿ ಕೋರಿಕೆ ಅರ್ಜಿ ಮೇಲೆ ವಿಶೇಷ ಜಿಲ್ಲಾಧಿಕಾರಿಯೊಂದಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸ್ಥಳ ತನಿಖೆ ಮಾಡಿರುವುದೂ ಸಹ ನ್ಯಾಯಬದ್ಧವಾಗಿರುತ್ತದೆ.

(ಉಪಸಭಾಪತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಶ್ರೀ ಜೆ.ಡಿ. ಸೋಮಪ್ಪ. ಡಿಸೆಂಬರ್ 15ನೇ ತಾರೀಖಿನ.....

ಉಪಾಧ್ಯಕ್ಷರು.— ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಇಲ್ಲ.

(ಗೊಂದಲ)

ಶ್ರೀ ಜೆ.ಡಿ. ಸೋಮಪ್ಪ.— ಮಾನ್ಯ ಮಂತ್ರಿಗಳವರು ಹೇಳಿದ್ದೆಲ್ಲಾ ಪತ್ರಿಕೆಗಳಿಗೆ ಹೋಗುತ್ತೆ. ಆದ್ದರಿಂದ ನಮಗೆ ತಾವು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು.— ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶವಿಲ್ಲ. ತಾವು ನಿಯಮ 334ರ ಕೆಳಗೆ ಕೇಳಿದ್ದೀರಿ. ಆದ್ದರಿಂದ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಎ. ಲಕ್ಷ್ಮೀ ಸಾಗರ್.— ಮಾನ್ಯ ಉಪಾಧ್ಯಕ್ಷರೇ, 334ರ ವ್ಯಾಪ್ತಿಯಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲವೆಂದು ಶ್ರೀ ಸೋಮಪ್ಪನವರಿಗೆ ತಾವು ಹೇಳಿದ್ದೀರಿ. ನಾನು ಅವರಿಗೆ ತಮ್ಮ ಮುಖಾಂತರ ಸಲಹೆ ಕೊಡುವುದಕ್ಕೆ ಇಷ್ಟಪಡುವುದೇನೆಂದರೆ, ಬೇರೆ ನಿಯಮಗಳ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಇಲ್ಲಿ ಅವಕಾಶ ಇದೆ. ಆದ್ದರಿಂದ ಅವರು ನೋಟೀಸ್ ಕೊಡಲಿ, ಚರ್ಚೆ ಮಾಡೋಣ. ಚರ್ಚೆ ಮಾಡುವುದಕ್ಕೆ ಆಗುವುದಿಲ್ಲವೆಂದು ನಾವು ಹೇಳುತ್ತಿಲ್ಲ.

ಉಪಾಧ್ಯಕ್ಷರು.— ಶ್ರೀ ಸೋಮಪ್ಪನವರೇ ನೀವು ನೋಟೀಸ್ ಕೊಡಿ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಮಾಣಿಕ್‌ರಾವ್ ಪಾಟೀಲ್.— ಮಾನ್ಯ ಮಂತ್ರಿಯವರು ಹೇಳಿಕೆ ಕೊಡುವಾಗ ಮಾನ್ಯ ಸದಸ್ಯರ ಮೇಲೆ ಸೀರಿಯಸ್ ಅಲಿಗೇಷನ್ ಮಾಡಿದ್ದಾರೆ. ಅವರ ಫಾರಂನಲ್ಲಿ ಲಾರಿ ಹೋಯಿತು, ಅದರಲ್ಲಿ ಸ್ಮಗ್ಲಿಂಗ್ ಮಾಡುತ್ತಿದ್ದರು ಎನ್ನತಕ್ಕ ಗಂಭೀರವಾದ ಆಪಾದನೆಯನ್ನು ಮಾಡುತ್ತಿದ್ದಾರೆ. ನಿಯಮ 334ರ ವ್ಯಾಪ್ತಿಯಲ್ಲಿ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಇಲ್ಲವೆಂದು ತಾವು ಹೇಳಿದಿರಿ, ಆದರೆ ಮಾನ್ಯ ಸದಸ್ಯರಿಗೆ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಜೆ.ಡಿ. ಸೋಮಪ್ಪ. ಮಾನ್ಯ ಮಂತ್ರಿಯವರು 5ಗಂಟೆಗೆಂದು ಹೇಳಿದ್ದಾರೆ. ಅದು ಸರಿಯಾದುದಲ್ಲ.

ಉಪಾಧ್ಯಕ್ಷರು — ನಾನು ಹೇಳುವುದನ್ನು ಸ್ವಲ್ಪ ಕೇಳಿ, ಮಾನ್ಯ ಸದಸ್ಯರಾದ ಶ್ರೀ ಸೋಮಪ್ಪನವರು ನಿಯಮ 334ರ ಕೆಳಗೆ ಈ ವಿಷಯವನ್ನು ಎತ್ತಿದ್ದಾರೆ. ಅವರಿಗೆ ಸರಿಯಾದ ಉತ್ತರ ಸಿಗದಿದ್ದರೆ ಬೇರೆ ನಿಯಮದ ಪ್ರಕಾರ ಅವರು ಇಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿದೆ. ಆದುದರಿಂದ ಅವರು ನೋಟೀಸನ್ನು ಕೊಡಲಿ. ಆದುದರಿಂದ ಈಗ ಇದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡುವ ಬಗ್ಗೆ ಹೊಸ ಅಧ್ಯಾಯವನ್ನು ಪ್ರಾರಂಭ ಮಾಡುವುದು ಬೇಡ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸೋಮಪ್ಪನವರು ಈ ವಿಚಾರದ ಬಗ್ಗೆ ಪ್ರತ್ಯೇಕವಾಗಿರತಕ್ಕ ಸೂಚನೆ ಕೊಟ್ಟು ಚರ್ಚೆ ಮಾಡಲಿ ಎಂದು ಹೇಳಿದಿರಿ, ಅದರ ಬಗ್ಗೆ ನನ್ನ ಅಭ್ಯಂತರ ಏನೂ ಇಲ್ಲ. ಮಾನ್ಯ ಮಂತ್ರಿಗಳವರು ಏನು ಹೇಳಿಕೆ ಕೊಟ್ಟಿದ್ದಾರೆ ಅದನ್ನು ನಾನು ನಿನ್ನೆಯೇ ನೋಡಿದ್ದೇನೆ. ಈ ಹೇಳಿಕೆಯಿಂದ ಮಾನ್ಯ ಸದಸ್ಯರ ತೇಜೋವಧೆಯಾಗಿದೆ, ಇದು ಸಣ್ಣ ವಿಚಾರವಲ್ಲ. ಮಾನ್ಯ ಸದಸ್ಯರಾದ

ಸೋಮಪ್ಪನವರು ಚರ್ಚೆ ಮಾಡುವುದಕ್ಕೆ ನಾನು ರೆಡಿ ಇದ್ದೇನೆ ಎಂದು ಹೇಳುತ್ತಿರುವುದರಿಂದ ಈ ಸಮಸ್ಯೆಯ ಗಂಭೀರತೆಯನ್ನು ತಾವು ಅರಿತುಕೊಳ್ಳಬಹುದು. ಮಾನ್ಯ ಮುಖ್ಯ ಮಂತ್ರಿಗಳವರು ಹೇಳಿಕೆ ಕೊಟ್ಟ ದಿವಸ ಅಥವಾ ಅದರ ಮಾರನೇ ದಿವಸವೇ ಒಬ್ಬ ಅಧಿಕಾರಿ ನನಗೆ ಸಿಕ್ಕಿ ಸೀಜ್ ಮಾಡಿರುವ ದಾಖಲೆಗಳ ಬಗ್ಗೆ ನನಗೆ ಹೇಳಿದ್ದರು. ಪುನಃ ಪುನಃ ಗಂಟು ಹಾಕಿ ಹೇಳತಕ್ಕಂಥಾದ್ದನ್ನು, ಅದಕ್ಕೂ ಇದಕ್ಕೂ ಸಂಬಂಧ ಮಾಡತಕ್ಕಂಥಾದ್ದನ್ನು, ಸದಸ್ಯರ ತೇಜೋವಧೆ ಮಾಡತಕ್ಕದ್ದನ್ನು ಸರ್ಕಾರ ಕೈಬಿಡಬೇಕೆಂದು ಹೇಳುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ.— ಲಾರಿ ಸೀಸ್ ಆಗಿದೆ ಎಂದು ಹೇಳಿದ್ದೀರಿ, ಅದು ಎಲ್ಲಿದೆ ಎನ್ನುವುದನ್ನು ಹೇಳಬೇಕು.

ಶ್ರೀ ಮಾಣಿಕರಾವ್ ಪಾಟೀಲ್.— ಈ ರಾಜ್ಯದಲ್ಲಿ ಇಲಿಗಳು, ತೋಳಗಳು, ಹುಲಿಗಳು ಇವೆ, ಅವುಗಳಿಂದ ಜನಗಳಿಗೆ ತೊಂದರೆಯಾಗುತ್ತದೆಂದು ತಿಳಿದೆ. ಅರಣ್ಯ ಮಂತ್ರಿಗಳು ತೊಂದರೆ ಕೊಡುವುದಕ್ಕೆ ಪ್ರಾರಂಭ ಮಾಡಿದರೆ ಹೇಗೆ ?

ಶ್ರೀ ಜೆ.ಡಿ. ಸೋಮಪ್ಪ.— ಸ್ವಾಮಿ, ನನಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು.— ನಾವು ನಿಮ್ಮ ಸಹಾಯಕ್ಕೆ ಬರುತ್ತೇವೆಂದರೂ ನಮ್ಮ ಸಹಾಯ ನೀವು ತೆಗೆದುಕೊಳ್ಳುವುದಿಲ್ಲವಲ್ಲ.

ಮಾನ್ಯ ಸದಸ್ಯರು.— ಸ್ವಾಮಿ, ನಾನು 334ರ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೆ, ಸರ್ಕಾರದವರು ಅದರ ಬಗ್ಗೆ ಉತ್ತರ ಹೇಳುತ್ತಾರೆಯೇ ?

ಶ್ರೀ ಎ ಲಕ್ಷ್ಮೀ ಸಾಗರ್.— ಸಾಕಷ್ಟು ವಿವರಗಳನ್ನು ತರಿಸಿಕೊಂಡು ಉತ್ತರ ಹೇಳುತ್ತೇನೆಂದು ನಿನ್ನೆ ದಿವಸವೇ ಹೇಳಿದ್ದೇನೆ.

7. ಗಮನ ಸೆಳೆಯುವ ಸೂಚನೆ

ವಿಷಯ : ಬಳ್ಳಾರಿ ನಗರದ ರಾಮನಗರ ಬಡಾವಣೆಯಲ್ಲಿ ಎಂಟು ಗುಡಿಸಲುಗಳು ಬೆಂಕಿ ಆಕಸ್ಮಿಕಕ್ಕೆ ಒಳಗಾಗಿ ಆ ಸಂಸಾರಗಳು ವಸತಿ ರಹಿತರಾಗಿರುವ ವಿಚಾರ

ಶ್ರೀ ಪಂ ರಾಮಪ್ಪ — ಮಾನ್ಯ ಅಧ್ಯಕ್ಷರೇ, ಬಳ್ಳಾರಿಯಲ್ಲಿ ರಾಮನಗರ ಎನ್ನುವ ಪ್ರದೇಶದಲ್ಲಿ ಸುಮಾರು 8 ಗುಡಿಸಲುಗಳು ಸುಟ್ಟು ಹೋಗಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಅಧ್ಯಕ್ಷರೇ, ಬಳ್ಳಾರಿಯಲ್ಲಿ ರಾಮಪ್ಪ ನಗರ ಎಂದು ಇದೆ, ರಾಮನಗರ ಎಂದು ಇಲ್ಲ. ಅದು ಮಾನ್ಯ ಸದಸ್ಯರ ಪೆಸರಿನಲ್ಲಿಯೇ ಇದೆ. ಮೊದಲು ಈ ವಿಚಾರದಲ್ಲಿ ದೂರು ಬರಲಿಲ್ಲ. 7 ಏಕರೆ ಪ್ರದೇಶವುಳ್ಳ ಆ ಜಾಗದ ಮಾಲೀಕರು ತಿಮ್ಮಪ್ಪ ಎಂದು. ಮಾನ್ಯ ರಾಮಪ್ಪನವರ ಆರೋಪ ಏನೆಂದರೆ, ತಿಮ್ಮಪ್ಪನವರು ತಿಂಗಳಿಗೆ ಇಂತಿಷ್ಟು ಬಾಡಿಗೆ ವಸೂಲು ಮಾಡುತ್ತಿದ್ದಾರೆ, ಗುಡಿಸಲುಗಳನ್ನು ಸುಟ್ಟು ಹಾಕುತ್ತಿದ್ದೇವೆಂದು ಪೆದರಿಸುತ್ತಿದ್ದಾರೆಂದು ಹೇಳಿದ್ದಾರೆ. ಆದರ ಬಗ್ಗೆ ಕೂಡ್ಲ ಕ್ರಮ ತೆಗೆದುಕೊಳ್ಳಲಾಗಿದೆ. ಸ್ಥಾನಿಕ ಅಧಿಕಾರಿಗಳು ಒಟ್ಟು 4300 ರೂಪಾಯಿ ಪರಿಹಾರ ಪೇಜಾರು ಮಾಡಿದ್ದಾರೆ. ಬಬ್ಬರಿಗೆ 300 ರಿಂದ 500 ರೂಪಾಯಿಗಳವರೆಗೆ ಪರಿಹಾರವನ್ನು ಕೊಟ್ಟಿದ್ದಾರೆ. ಜೊತೆಗೆ ರಾಮಪ್ಪನವರ ಮನೆಯವರು ಪ್ರತಿಯೊಬ್ಬರಿಗೂ 200 ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿರತಕ್ಕವರೆಲ್ಲರೂ ರಾಮಪ್ಪನವರ ಅಭಿಮಾನಿಗಳೇ. ಘಟನೆ ನಡೆದದ್ದು 24ನೇ ತಾರೀಖಿನ 27ನೇ ತಾರೀಖಿನ ಒಂದು ದೂರು ಬಂದಿದೆ. ತಿಮ್ಮಪ್ಪನವರು ಇದರ ಮೇಲೆ ಉದ್ದೇಶ ಪೂರ್ವಕವಾಗಿ ಹಾನಿ ಮಾಡಿದ್ದಾರೆ. ಆದುದರಿಂದ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ, ಮುಂದಿನ ಕ್ರಮವನ್ನು ಪೋಲೀಸಿನವರು ಕೈಗೊಂಡಿದ್ದಾರೆ.

ಶ್ರೀ ಎಂ. ರಾಮಪ್ಪ.— ಪರಿಹಾರ ಧನ ಜಾಸ್ತಿ ಕೊಡುವುದಕ್ಕೆ ವ್ಯವಸ್ಥೆ ಮಾಡಿ, ಅಲ್ಲಿರುವವರೆಲ್ಲರೂ ನಿರ್ಗತಿಕರಾಗಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ. — ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ತರುವುದಕ್ಕೆ ಇಚ್ಛಿಸುತ್ತೇನೆ. ಕೂಡಲೇ ಸಹಾಯ ಮಾಡುವುದಕ್ಕೆ ತಹಶೀಲ್ದಾರರವರ ಹತ್ತಿರ ಹಣ ಇರುವುದಿಲ್ಲ. ಜಾಸ್ತಿ ಕೂತ ಕೊಡುವುದಕ್ಕೂ ಬರುವುದಿಲ್ಲ. ಹಳೇ ಕಾಲದ ರೀತಿನಲ್ಲಿಯೇ ಪರಿಹಾರ ಧನ ಕೊಡಲಾಗುತ್ತಿದೆ. ನಾಟಾಗಳು ಮತ್ತು ಮರವಟ್ಟುಗಳನ್ನು ಕೊಡಬೇಕಾದರೂ ಹಳೇ ರೇಟಿನ ಪ್ರಕಾರ ಕೊಡುತ್ತಿದ್ದಾರೆ. ಇದನ್ನು ಸ್ವಲ್ಪ ಪರಿಷ್ಕರಣಮಾಡಿ, ಹೊಸ ರೇಟನ್ನು ಗೊತ್ತು ಮಾಡಿದರೆ ಒಳ್ಳೆಯದು. ಅಲ್ಲದೆ, ಪರಿಹಾರಧನವನ್ನು ತಕ್ಷಣ ಕೊಡುವಂಥ ವ್ಯವಸ್ಥೆಯನ್ನು ಸರ್ಕಾರದವರು ಇಟ್ಟುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ.